ಓ.ಎಸ್. ನಂ. 26/2016
ಪಿ.ಡಬ್ಲ್ಯೂ- 2

(ಇಂದು ದಿಃ 05-06-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು)

ಪಾಟೀ ಸವಾಲು **:- ಶ್ರೀ. BSS** ವಕೀಲರಿಂದ **:-**

ಕೊಡ್ಲಾ ಗ್ರಾಮದ ಈರಣ್ಣ ತಂದೆ ನಿಂಗಪ್ಪ ತೊಂಬಾಕೆ ನನಗೆ ಪರಿಚಯ ಇದ್ದಾರೆ. 5 ನೇ ಪ್ರತಿವಾದಿ ಕೊಡ್ಲಾ ಗ್ರಾಮದ ಸರ್ವೆ ನಂಬರ 752/2 ರಲ್ಲಿನ 2 ಎಕರೆ 6 ಗುಂಟೆ ಜಮೀನನ್ನು 4 ನೇ ಪ್ರತಿವಾದಿಯಿಂದ ಖರೀದಿ ಮಾಡಿದದಾರೆ ಎಂದರೆ ಸರಿಯಲ್ಲ. 4 ನೇ ಪ್ರತಿವಾದಿ 5 ನೇ ಪ್ರತಿವಾದಿಗೆ ನೋಂದಾಯಿತ ಖರೀದಿ ಪತ್ರದ ಮೂಲಕ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ 2011-12 ರಲ್ಲಿ ಖರೀದಿ ಪತ್ರದ ಪ್ರಕಾರ 5 ನೇ ಪ್ರತಿವಾದಿ ಹೆಸರಿಗೆ ಮುಟೇಷನ ಆಗಿದ್ದು ಅಂದಿನಿಂದ ಆತನ ಹೆಸರಿಗೆ ಪಹಣಿ ಬರುತ್ತಿದೆ ಎಂದರೆ ಸರಿಯಲ್ಲ. ಸದರಿ 2 ಎಕರೆ 6 ಗುಂಟೆ ಜಮೀನಿನಲ್ಲಿ ಖರೀದಿ ಆದಾಗಿನಿಂದ 5 ನೇ ಪ್ರತಿವಾದಿ ಸ್ವಾಧಿನದಲ್ಲಿದ್ದಾರೆ ಎಂದರೆ ಸರಿಯಲ್ಲ. 2011-12 ರಲ್ಲಿ 5 ನೆ ಪ್ರತಿವಾದಿ 4 ನೇ ಪ್ರತಿವಾದಿಯಿಂದ ಜಮೀನು ಖರೀದಿ ಮಾಡಿರುವುದು ನನಗೆ ಗೊತ್ತಿಲ್ಲ. ಸದರಿ ಖರಿದಿ ಪತ್ರ ವನ್ನು ಇಲ್ಲಿಯವರೆಗೆ ನಾನು ಪ್ರಶ್ನೆ ಮಾಡಿಲ್ಲ ಎಂದರೆ ಸರಿ. ಸದರಿ 2 ಎಕರೆ 6 ಗುಂಟೆಯಲ್ಲಿ ನನಗೆ ಯಾವುದೇಹಕ್ಕು ಇಲ್ಲದಿದ್ದರೂ ವಿನಃ ಕಾರಣ 5 ನೇ ಪ್ರತಿವಾದಿ ವಿರುದ್ಧ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 4 ನೇ ಪ್ರತಿವಾದಿ ನನ್ನ ತಾತನಿಂದ ಸದರಿ ಜಮೀನು ಖರೀದಿ ಮಾಡಿದ್ದರು ಎಂದರೆ ಸರಿಯಲ್ಲ. ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ. ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಸೇಡಂ.